ವರ್ಷ	ಕುಂದಾಪುರ	ಉಡುಪಿ	ಕಾರ್ಕಳ
2002–03	14 ಮರ	15 ಮರ	26 ಮರ
	1.551	3.110	1.770
	ಘ.ಮೀ.ನಾಟ	ಘ.ಮೀ.ನಾಟ	ಘ.ಮೀ.ನಾಟ
	1.000	7.000	--
	ಘ.ಮೀ.ಕಟ್ಟಿಗೆ	ಘ.ಮೀ.ಕಟ್ಟಿಗೆ	
	30 ಎಳೆ	18 ಎಳೆ	--
2003–04	27 ಮರ	112 ಮರ	28 ಮರ
	2.004	53.488	2.350
	ಘ.ಮೀ.ನಾಟ	ಘ.ಮೀ.ನಾಟ	ಘ.ಮೀ.ನಾಟ
	3.50	17.000	--
	ಘ.ಮೀ.ಕಟ್ಟಿಗೆ	ಘ.ಮೀ.ಕಟ್ಟಿಗೆ	--
	--	28 ಎಳೆ	--
2004–05	381 ಮರ	150 ಮರ	142 ಮರ
	33.421	14.052	70.712
	ಘ.ಮೀ.ನಾಟ	ಘ.ಮೀ.ನಾಟ	ಘ.ಮೀ.ನಾಟ
	121.500	27.750	53.205
	ಘ.ಮೀ.ಕಟ್ಟಿಗೆ	ಘ.ಮೀ.ಕಟ್ಟಿಗೆ	ಘ.ಮೀ.ಕಟ್ಟಿಗೆ
	83 ಎಳೆ	39 ಎಳೆ	481 ಎಳೆ

ಈ) ಅರಣ್ಯ ತಕ್ಷೀರಿನಲ್ಲಿ ಕಾನೂನಿನನ್ವಯ ಮುಟ್ಟುಗೋಲು ಹಾಕಿಕೊಂಡಿರುವ ಸೊತ್ತುಗಳನ್ನು ಆಯಾ ಸಂಬಂಧಪಟ್ಟ ವಲಯಾರಣ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಡಿಪೋ ಟೆಂಕೆ ಡಿಪೋಗಳಿಗೆ ಸಾಗಾಣಿಕೆ ಮಾಡಿ, ಹರಾಜಿನ ಮೂಲಕ ಸೊತ್ತುಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ವಿಲೇವಾರಿ ಮಾಡಲಾದ ಮರಮುಟ್ಟುಗಳ ವಿವರಣೆಯನ್ನು ಪ್ರಶ್ನೆ 'ಆ' ದಲ್ಲಿ ನೀಡಲಾಗಿದೆ.

4870(5128) ಶ್ರೀ ಸುನೀಲ್ ಕುಮಾರ್ ಎ. (ಕಾರ್ಕಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರದ ಆದೇಶದಂತೆ ದಿನಾಂಕ 31–3–2003 ರವರೆಗಿನ ನೀರಾವರಿ ಪಂಪ್ ಸೆಟ್‌ಗಳ ಎಲ್ಲಾ ವಿದ್ಯುತ್ ಬಿಲ್ ಬಾಕಿಯನ್ನು ಮನ್ನಾ

ಮಾಡಿ ಆದೇಶ ಹೊರಡಿಸಿದ್ದು ದಿನಾಂಕ 1–4–2003ರ ನಂತರ ಬಿಲ್ ಬಾಕಿ ಪಾವತಿ ಮಾಡಿದವರಿಗೆ ಮಾತ್ರ ಪಾವತಿಸಿದ ಮೊತ್ತವನ್ನು ಮುಂದಿನ ಬಿಲ್‌ಗಳಲ್ಲಿ ಹೊಂದಾಣಿಕೆ ಮಾಡುವ ಬಗ್ಗೆ ಮೆಸ್ಕಾಂನವರು ಕ್ರಮ ಕೈಗೊಂಡಿರುವರೇ (ವಿವರ ನೀಡುವುದು);

ಆ) ದಿನಾಂಕ 31–3–2003ರ ಮೊದಲೇ ನಿಯಮಿತವಾಗಿ ಬಾಕಿಯನ್ನು ಪಾವತಿಸಿದವರಿಗೆ ಪಾವತಿಸಿದ ಮೊತ್ತವನ್ನು ಮುಂದಿನ ಸಾಲಿಗೆ ಮರು ಹೊಂದಾಣಿಕೆ ಮಾಡದೇ ಇರುವುದು ನಿಜವೇ; ಹಾಗಿದ್ದಲ್ಲಿ, ಮರುಪಾವತಿ ಬಗ್ಗೆ ತ್ವರಿತ ನಿರ್ದೇಶನ ಸರ್ಕಾರ ನೀಡಲಾಗುವುದೇ (ವಿವರ ನೀಡುವುದು);

ಇ) ಮೆಸ್ಕಾಂ ಇಲಾಖೆ ಈ ರೀತಿಯ ವ್ಯತಿರಿಕ್ತತೆ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ;

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಸರ್ಕಾರವು ದಿನಾಂಕ 31–3–2003ರ ಅಂತ್ಯದವರೆಗಿದ್ದ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಾಕಿಯನ್ನು ದಿನಾಂಕ 21–2–2004ರ ಆದೇಶದಲ್ಲಿ ಮನ್ನಾ ಮಾಡಿದೆ ಹಾಗೂ 31–3–2003ರ ಅಂತ್ಯದಲ್ಲಿದ್ದ ಬಾಕಿಯನ್ನು ದಿನಾಂಕ 1–4–2003ರಂದು ಅಥವಾ ಮುಂದಿನ ದಿನಗಳಲ್ಲಿ ಪಾವತಿಸಿದ ರೈತರಿಗೆ 2003–04 ರಲ್ಲಿನ ವಿದ್ಯುತ್ ಬಿಲ್‌ಗಳಲ್ಲಿ ಹೊಂದಾಣಿಕೆ ಮಾಡಲು ಆದೇಶಿಸಿದೆ. ಅದರಂತೆ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ತನ್ನ ವ್ಯಾಪ್ತಿಯಲ್ಲಿ ದಿನಾಂಕ 1–4–2003ರ ನಂತರ 31–3–2003ರ ಅಂತ್ಯದಲ್ಲಿದ್ದ ಬಾಕಿಯನ್ನು ಪಾವತಿಸಿರುವ ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ 2003–04 ರಲ್ಲಿನ ವಿದ್ಯುತ್ ಬಿಲ್ಲುಗಳಿಗೆ ಹೊಂದಾಣಿಕೆ ಮಾಡಿರುತ್ತದೆ.

ಆ) ಮತ್ತು ಇ) ದಿನಾಂಕ 31–3–2003ರವರೆಗೆ ರೈತ ಪಂಪ್ ಸೆಟ್ ಬಾಕಿಯನ್ನು ಮನ್ನಾ ಮಾಡಿದ ಸಂದರ್ಭದಲ್ಲಿ, ಕೆಲವು ರೈತರು (ಪ್ರಾಮಾಣಿಕ) ವಿದ್ಯುತ್ ಬಿಲ್ಲನ್ನು ಸಂದಾಯ ಮಾಡಿದ್ದು ಅಂತಹ ರೈತರಿಗೆ ಹಣ ವಾಪಸ್ ಅಥವಾ ಮುಂದಿನ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.